**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ರ ಮಧ್ಯಕಾಲೀನ ಅರ್ಜಿ ಸಂಖ್ಯೆ: 4 ರ ಮೇಲಿನ ಆದೇಶಃ**

ಪ್ರಸ್ತುತ ಅರ್ಜಿಯನ್ನು ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ರಂತೆ ಸಲ್ಲಿಸಿ, ಅರ್ಜಿದಾರರನ್ನು ಈ ದಾವಾದಲ್ಲಿ ಅಧಿಕ ಪ್ರತಿವಾದಿಯನ್ನಾಗಿ ಸೇರಿಸುವಂತೆ ಆದೇಶಿಸಬೇಕಾಗಿ ಕೋರಿರುತ್ತಾರೆ.

2. ಅರ್ಜಿದಾರರು ಅರ್ಜಿಯೊಂದಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿ, ಪ್ರಮಾಣ ಪತ್ರದಲ್ಲಿ 1ನೇ ಪ್ರತಿವಾದಿಯು ಅರ್ಜಿದಾರರ ತಂದೆಯಾಗಿದ್ದು, ದಾವಾ ಆಸ್ತಿಗಳು ತಮ್ಮ ಒಟ್ಟು ಕುಟುಂಬ ಆಸ್ತಿಗಳು ಆಗಿರುತ್ತದೆ. ಸದರಿ ಆಸ್ತಿಗಳ ಮೇಲೆ ತಮಗೂ ಕೂಡಾ ಸರಿ ಸಮಾನದ ಹಿಸ್ಸೆಯ ಹಕ್ಕು ಇರುತ್ತದೆ. ಈ ವಿಷಯವನ್ನು ಮರೆಮಾಚಿ, 1ನೇ ಪ್ರತಿವಾದಿಯ ಜೊತೆ ಷರೀಕ್ಕಾಗಿ ವಾದಿಯು ಈ ದಾವಾವನ್ನು ನ್ಯಾಯಾಲಯದ ಮುಂದೆ ತಂದಿರುತ್ತಾರೆ. ಸದರಿ ಆಸ್ತಿಗಳ ಮೇಲೆ ತಮಗೂ ಸಮನಾದ ಹಿಸ್ಸೆ ಹಕ್ಕು ಇರುವುದರಿಂದ 1ನೇ ಪ್ರತಿವಾದಿಗೆ ಸದರಿ ಆಸ್ತಿಗಳನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರುವುದಿಲ್ಲ, ಆದ್ದರಿಂದ ಅರ್ಜಿದಾರರುಗಳನ್ನು ಈ ದಾವಾದಲ್ಲಿ ಅಧಿಕ ಪಕ್ಷಗಾರರನ್ನಾಗಿ ಸೇರಿಸಿಕೊಳ್ಳಲು ಕೋರಿರುತ್ತಾರೆ.

3. ವಾದಿಯು ಆಕ್ಷೇಪಣೆಯನ್ನು ಸಲ್ಲಿಸಿ, ದಾವಾ ಅನುಸೂಚಿ ಆಸ್ತಿಯು ಪ್ರತಿವಾದಿಗೆ ಮಂಜೂರಾದ ಸ್ವಯಾರ್ಜಿತವಾದ ಆಸ್ತಿಯಾಗಿದ್ದು, ಸದರಿ ಸ್ವತ್ತನ್ನು ಪ್ರತಿವಾದಿಯು ತನ್ನ ಇಚ್ಛೆಯಾನುಸಾರ ತನ್ನ ದರದ್ದು ನಿಮಿತ್ತ, ಸಾಲವನ್ನು ತೀರುವಳಿ ಮಾಡುವ ಉದ್ದೇಶವಾಗಿ ಮಾರಾಟ ಮಾಡಲು ಪ್ರಚುರಪಡಿಸಿದ್ದರ ಮೇರೆಗೆ, ವಾದಿಯು ಕ್ರಯಕ್ಕೆ ಕೊಳ್ಳಲು ಒಪ್ಪಿದ್ದರಿಂದ ಪ್ರತಿವಾದಿಯು ಕ್ರಯದ ಪ್ರತಿಫಲದ ಹಣವನ್ನು ಮುಂಗಡವಾಗಿ ಪಡೆದುಕೊಂಡು, ಉಪ ನೊಂದಾಣಾಧಿಕಾರಿಯವರ ಕಚೇರಿಯಲ್ಲಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ದಾವಾ ಅನುಸೂಚಿ ಸ್ವತ್ತು ಪ್ರತಿವಾದಿಯ ಸ್ವಯಾರ್ಜಿತವಾದ ಆಸ್ತಿಯಾದ ಕಾರಣ ಅರ್ಜಿದಾರರನ್ನು ಈ ದಾವಾದಲ್ಲಿ ಸೇರಿಸಿಕೊಳ್ಳಲು ಯಾವುದೇ ಸಕಾರಣಗಳು ಇರುವುದಿಲ್ಲ, ಆದ್ದರಿಂದ ಸದರಿ ಅರ್ಜಿಯನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

4. ಉಭಯತ್ರರ ವಾದ ಪ್ರತಿವಾದವನ್ನು ಆಲಿಸಲಾಯಿತು.

5. ಅರ್ಜಿ ಮತ್ತು ಆಕ್ಷೇಪಣೆಯನ್ನು ಪರಿಶೀಲಿಸಿದ್ದೇನೆ ಮತ್ತು ಅರ್ಜಿಯ ಇತ್ಯರ್ಥಕ್ಕಾಗಿ ಈ ಕೆಳಗಿನಂತೆ ಅಂಶಗಳನ್ನು ರೂಪಿಸಿರುತ್ತೇನೆಃ

1. ಅರ್ಜಿದಾರರು ಮಧ್ಯಂತರ ಅರ್ಜಿ-4ರಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರೇ?

2. ಏನು ಆದೇಶ?

6. ಈ ಪ್ರಕರಣದ ಕಡತ ಮತ್ತು ಅರ್ಜಿದಾರರ ಅರ್ಜಿ ಹಾಗೂ ವಾದಿಯು ಸಲ್ಲಿಸಿರುವ ಆಕ್ಷೇಪಣೆ ಹಾಗೂ ದಾಖಲೆಯನ್ನು ಪರಿಗಣಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆಃ

| | | | | |
|---|---|---|---|---|
| ಅಂಶ | - | 1 | ಃ | ಸಕಾರಾತ್ಮಕವಾಗಿ |
| ಅಂಶ | - | 2 | ಃ | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

ಃಕಾರಣಗಳುಃ

7. ಅಂಶ ಸಂಖ್ಯೆಃ1ಃ ಈ ದಾವಾವನ್ನು ವಾದಿಯು ಪ್ರತಿವಾದಿಯ ವಿರುದ್ಧ ನಿರ್ದಿಷ್ಟ ನೆರವೇರಿಕೆ ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆ. ವಾದಿಯ ಪ್ರಕಾರ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಚುರಪಡಿಸಿದಾಗ, ವಾದಿಯು ಒಪ್ಪಿ, ಅದರಂತೆ ರೂ.40,000-00ಗಳ ಪ್ರತಿಫಲದ ಹಣವನ್ನು ಕೊಡಲು ಉಭಯ ಪಕ್ಷಗಾರರು ಒಪ್ಪಿ, ದಿನಾಂಕಃ 16-08-2012 ರಂದು ಕ್ರಯದ ಕರಾರು ಪತ್ರವನ್ನು ಮಾಡಿಕೊಂಡು, ಅದನ್ನು ಸಂಬಂಧಿಸಿದ ನೊಂದಾವಾಣಾಧಿಕಾರಿಗಳ ಕಚೇರಿಯಲ್ಲಿ ನೊಂದಾವಣೆ ಮಾಡಿಸಿರುವುದಾಗಿ ತಿಳಿಸಿರುತ್ತಾರೆ. ಆದರೆ ಸದರಿ ಕ್ರಯದ ಕರಾರು ಪತ್ರದಲ್ಲಿ ತೋರಿಸಿರುವ ಸಮಯದಲ್ಲಿ ಪ್ರತಿವಾದಿಯು ವಾದಿಯ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಶುದ್ಧ ಕ್ರಯಪತ್ರವನ್ನು ಬರೆದುಕೊಡಲು ವಿಫಲರಾಗಿರುತ್ತಾರೆ. ಆದಕಾರಣ ವಾದಿಯು ಪ್ರತಿವಾದಿಗೆ ತಮ್ಮ ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸ್ ಜಾರಿಯಾಗಿದ್ದರೂ ಸಹ, ಪ್ರತಿವಾದಿಯು ವಾದಿಯ ಹೆಸರಿಗೆ ಕ್ರಯಪತ್ರವನ್ನು ಬರೆದುಕೊಡಲು ವಿಫಲರಾಗಿರುತ್ತಾರೆ. ಆದ್ದರಿಂದ ವಾದಿಯು ಈ ದಾವಾವನ್ನು ನ್ಯಾಯಾಲಯದ ಮುಂದೆ ತಂದಿರುತ್ತಾರೆ. ಪ್ರತಿವಾದಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾಗಿದ್ದು, ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಸದರಿ ಕ್ರಯದ ಕರಾರು ಪತ್ರವನ್ನು ಸ್ಪಷ್ಟವಾಗಿ ಅಲ್ಲಗೆಳೆದಿರುತ್ತಾರೆ. ಅದೇ ರೀತಿ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಅನುಸೂಚಿ ಸ್ವತ್ತು ತಮ್ಮೊಬ್ಬರ ಆಸ್ತಿಯಾಗಿರುವುದಿಲ್ಲ, ಅದೇ ರೀತಿ ದಾವಾ ಅನುಸೂಚಿ ಸ್ವತ್ತು ತಮ್ಮ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಆಗಿದ್ದು, ಪ್ರತಿವಾದಿಗೂ ಮತ್ತು ಅವರ ಮಕ್ಕಳಿಗೂ ಸಮಾನ ಪಾಲು ಹಿಸ್ಸೆ ಇರುವುದಾಗಿ ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ. ಅರ್ಜಿದಾರರು ಹಾಜರುಪಡಿಸಿರುವ ಅರ್ಜಿಯಲ್ಲಿ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿರುವ ಅಂಶಕ್ಕೂ ಮತ್ತು ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ತೆಗೆದುಕೊಂಡಿರುವ ನಿಲುವಿಗೂ ಒಂದಕ್ಕೊಂದು ತಾಳೆ ಇರುತ್ತದೆ. ಯಾವುದೇ ಒಂದು ಜಮೀನು ಕುಟುಂಬದ ಹಿರಿಯ ಸದಸ್ಯರಿಗೆ ಮಂಜೂರಾಗಿದ್ದ ಪಕ್ಷದಲ್ಲಿ, ಸದರಿ ಜಮೀನು ಜಂಟಿ ಕುಟುಂಬದ ಆಸ್ತಿ ಆಗಿರುತ್ತದೆ ಎಂದು ಮಾನ್ಯ ಉಚ್ಛ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯಗಳು ಅನೇಕ ತೀರ್ಪಿನಲ್ಲಿ ಉಲ್ಲೇಖಿಸಿರುತ್ತಾರೆ. ಆದ್ದರಿಂದ ಈ ದಾವಾದಲ್ಲಿ ದಾವಾ ಆಸ್ತಿಯು ಪ್ರತಿವಾದಿಯ ಹೆಸರಿಗೆ ಮಂಜೂರಾಗಿದ್ದರೂ ಸಹ, ಪ್ರತಿವಾದಿ ಮತ್ತು

ಅರ್ಜಿದಾರರು ಇಬ್ಬರೂ ಪ್ರತಿವಾದಿಯ ಕುಟುಂಬದ ಸದಸ್ಯರು ಆಗಿದ್ದು, ಪ್ರತಿವಾದಿಯು ಕುಟುಂಬದ ಹಿರಿಯ ಸದಸ್ಯರಾದ ಆದ ಕಾರಣ ಪ್ರತಿವಾದಿಯ ಹೆಸರಿನಲ್ಲಿರುವ ದಾವಾ ಆಸ್ತಿ ಮಂಜೂರಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ದಾವಾ ಆಸ್ತಿಯಲ್ಲಿ ಅರ್ಜಿದಾರರಿಗೂ ಸಹ ಹಿಸ್ಸೆಯ ಹಕ್ಕು ಇರುವ ಬಗ್ಗೆ ಮೇಲ್ನೋಟಕ್ಕೆ ಕಂಡುಬರುತ್ತದೆ. ಇದರಿಂದ ಅರ್ಜಿದಾರರನ್ನು ಈ ದಾವಾದಲ್ಲಿ ತಮ್ಮ ಹಕ್ಕನ್ನು ಪ್ರತಿಪಾದಿಸಲು ಅವರನ್ನು ಅಧಿಕ ಪ್ರತಿವಾದಿಯರನ್ನಾಗಿ ಸೇರಿಸಲು ಸಾಕಷ್ಟು ಸಕಾರಣಗಳು ಇರುತ್ತದೆ. ಒಂದು ವೇಳೆ ಈ ಅರ್ಜಿದಾರರನ್ನು ಈ ದಾವಾದಲ್ಲಿ ಪಕ್ಷಗಾರರನ್ನಾಗಿ ಸೇರಿಸದೇ ಇದ್ದ ಪಕ್ಷದಲ್ಲಿ ಬಹುಮುಖ ವ್ಯವಹರಣೆಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲು ಸಾಕಷ್ಟ ಸಕಾರಣಗಳು ಇರುತ್ತದೆ. ಅದರಂತೆ ಅರ್ಜಿದಾರರು ಸಲ್ಲಿಸಿರುವ ಮಧ್ಯಕಾಲೀನ ಅರ್ಜಿ-4 ನ್ನು ಪುರಸ್ಕರಿಸಲು ಅರ್ಹವಾಗಿರುತ್ತದೆ. ಪ್ರಯುಕ್ತ ಸದರಿ ಅಂಶವನ್ನು "ಸಕಾರಾತ್ಮಕ" ವಾಗಿ ಉತ್ತರಿಸಿದ್ದೇನೆ.

ಅಂಶ ಸಂಖ್ಯೆ:2ಃ-

8. ಈ ಮೇಲ್ಕಂಡ ಅಂಶದಲ್ಲಿನ ಕಾರಣಗಳಿಂದ ಈ ಕೆಳಕಂಡಂತೆ ಅಂತಿಮ ಆದೇಶವನ್ನು ಮಾಡಿರುತ್ತೇನೆಃ

ಃಆದೇಶಃ

ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ರಡಿ ಸಲ್ಲಿಸಿರುವ ಮಧ್ಯಕಾಲೀನ ಅರ್ಜಿ ಸಂಖ್ಯೆ: 4 ಪುರಸ್ಕರಿಸಲಾಗಿದೆ.

ಅದರಂತೆ ಈ ದಾವಾದಲ್ಲಿ ಅರ್ಜಿದಾರರನ್ನು ಅಧಿಕ ಪ್ರತಿವಾದಿಯನ್ನಾಗಿ ಸೇರ್ಪಡೆಗೊಳಿಸಲು ಆದೇಶ ಮಾಡಲಾಗಿದೆ.

ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರಳಿಗೆ ಉಕ್ತಲೇಖನವನ್ನು ಕೊಟ್ಟು, ಪರಿಷ್ಕರಿಸಿ, ತಿದ್ದುಪಡಿ ಮಾಡಿ ದಿನಾಂಕಃ 20ನೇ ಜನವರಿ 2020 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

(ನಾಗೇಶ ಪಿ.)
ಸಿವಿಲ್ ನ್ಯಾಯಾಧೀಶರು, ಬೇಲೂರು.